# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
# (SA 2)

## 2019–20

**ತರಗತಿ: ೯ನೇ ತರಗತಿ** **ಅಂಕಗಳು: ೮೦**

**ವಿಷಯ: ಸಮಾಜ ವಿಜ್ಞಾನ** **ಸಮಯ: ೩ಗಂಟೆ**

**ಈ ಫೈಲ್ ಒಳಗೊಂಡಿರುವುದು,**

- ೮೦ ಅಂಕಗಳಿಗೆ ಎಸ್.ಎಸ್.ಎಲ್.ಸಿ. ಮಾದರಿಯಲ್ಲಿಯ ಪ್ರಶ್ನೆಪತ್ರಿಕೆ
- ಉದ್ದಿಷ್ಟವಾರು, ಕಾಠಿಣ್ಯತೆವಾರು ಪ್ರಶ್ನಾವಾರು ಹಾಗೂ ಥೀಮ್ ವಾರು ಅಂಕಗಳ ಹಂಚಿಕೆ
- ನೀಲನಕಾಶೆ
- ಪ್ರಶ್ನೆ ಪತ್ರಿಕೆ ವಿಶ್ಲೇಷಣೆ
- ಮಾದರಿ ಉತ್ತರಗಳು

**–:ರಚನೆ:–**
**ಮಹಾದೇವಪ್ಪ ಕುಂದರಗಿ,**
**ಸರ್ಕಾರಿ ಪ್ರೌಢ ಶಾಲೆ ಆವತಿ,**
**ಚಿಕ್ಕಮಗಳೂರು ತಾ&ಜಿ**
**9481216233**

ಯಾವ ಪುಟ(page)ದಲ್ಲಿಯೂ ಹೆಸರು & ವಾಟರ್ ಮಾರ್ಕ್ ಇರುವುದಿಲ್ಲ

- ಸಲಹೆಗಳಿಗೆ ಸದಾ ಸ್ವಾಗತ

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

ತರಗತಿ: 9ನೇ ತರಗತಿ **2019–20** ಅಂಕಗಳು: 80

ವಿಷಯ: ಸಮಾಜ ವಿಜ್ಞಾನ ಸಮಯ:3ಗಂಟೆ

---

**I.** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರಗಳೊಂದಿಗೆ ಬರೆಯಿರಿ: **8x1=8**

1. ಭಾರತದಲ್ಲಿ ಮೊಟ್ಟಮೊದಲ ಷೇರುಮಾರುಕಟ್ಟೆ ಪ್ರಾರಂಭವಾದ ಸ್ಥಳ
   **A.** ಬೆಂಗಳೂರು
   **B.** ದೆಹಲಿ
   **C.** ಮುಂಬೈ
   **D.** ಕಲ್ಕತ್ತ

2. ವೃದ್ಧಾಪ್ಯ ವೇತನಕ್ಕಾಗಿ ಜಾರಿಗೊಂಡಿರುವ ಯೋಜನೆಯ ಹೆಸರು
   **A.** ಯಶಸ್ವಿನಿ ಯೋಜನೆ
   **B.** ಇಂದಿರಾ ಆವಾಸ್ ಯೋಜನೆ
   **C.** ದೀನ ದಯಾಳ ಅಂತ್ಯೋದಯ ಯೋಜನೆ
   **D.** ಸಂಧ್ಯಾ ಸುರಕ್ಷಾ ಯೋಜನೆ

3. ಶರಾವತಿ ನದಿಯು ಪ್ರಸಿದ್ಧಿಯನ್ನು ಪಡೆದಿರುವುದು
   **A.** ಕೃಷ್ಣರಾಜಸಾಗರ ಅಣೆಕಟ್ಟಿನಿಂದಾಗಿ
   **B.** ಜೋಗ್ ಜಲಪಾತದಿಂದಾಗಿ
   **C.** ಕರ್ನಾಟಕದ ಅತಿ ಉದ್ದ ನದಿಯಾಗಿರುವುರಿಂದಾಗಿ
   **D.** ಕೋಲಾರದ ಚಿನ್ನದ ಗಣಿಗೆ ನೀರು ಸರಬರಾಜು ಮಾಡುತ್ತಿರುವುದರಿಂದಾಗಿ

4. ಭಾರತೀಯ ಸಮಾಜದ ಆಧಾರ ಸ್ತಂಭ
   **A.** ಅಲೆಮಾರಿ ಸಮುದಾಯ
   **B.** ಬುಡಕಟ್ಟು ಸಮುದಾಯ
   **C.** ಗ್ರಾಮ ಸಮುದಾಯ
   **D.** ನಗರ ಸಮುದಾಯ

5. ರಾಮಾನುಜಾಚಾರ್ಯರ "ವಿಶಿಷ್ಟಾದ್ವೈತ"ದ ಪ್ರಕಾರ
   **A.** ಜಗತ್ತು ಒಂದು ಮಾಯೆ. ಬ್ರಹ್ಮ ಮಾತ್ರ ಸತ್ಯ.
   **B.** ಜಗತ್ತು ಮಾಯೆಯಲ್ಲ. ಅದು ಪರಮಾತ್ಮನಷ್ಟೇ ಸತ್ಯ.
   **C.** ಜೀವ ಮತ್ತು ಪ್ರಕೃತಿ ಬ್ರಹ್ಮನ ಅಧೀನ.
   **D.** ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆಯಲ್ಲ. ಎರಡೂ ಒಂದೇ.

6. ಅಮೇರಿಕ ಸ್ವಾತಂತ್ರ್ಯ ಸಂಗ್ರಾಮವು
   **A.** ಫ್ರಾನ್ಸ್ ಮಹಾಕ್ರಾಂತಿಗೆ ಪ್ರಚೋದನೆ ನೀಡಿತು.
   **B.** ಸಪ್ತವಾರ್ಷಿಕ ಯುದ್ಧಕ್ಕೆ ಕಾರಣವಾಯಿತು.
   **C.** ಹೊಸ ಇಂಗ್ಲಿಷ್ ವಸಾಹತುಗಳ ಸ್ಥಾಪನೆಗೆ ಕಾರಣವಾಯಿತು.
   **D.** ವಿಶ್ವ ಮಹಾ ಸಮರಗಳಿಗೆ ಕಾರಣವಾಯಿತು.

7. ವಿಧಾನಸಭೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ
   **A.** ಯಾವುದೇ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 600ಕ್ಕಿಂತ ಹೆಚ್ಚಿರಬಾರದು.
   **B.** ಯಾವುದೇ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 50ಕ್ಕಿಂತ ಕಡಿಮೆ ಇರಬಾರದು.
   **C.** ವಿಧಾನಸಭೆಗೆ ರಾಜ್ಯಪಾಲರು ಇಬ್ಬರು ಆಂಗ್ಲೋ ಭಾರತೀಯರನ್ನು ನೇಮಕ ಮಾಡುತ್ತಾರೆ.
   **D.** ವಿಧಾನಸಭೆಯ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖೆಯನ್ನು ಆಧರಿಸಿರುತ್ತದೆ.

8. ಸಾಮಾಜಿಕ ಬದಲಾವಣೆಯು
   **A.** ಒಂದೇ ರೂಪ ಮತ್ತು ಗತಿ ಹೊಂದಿರುವುದು.
   **B.** ಸಾರ್ವತ್ರಿಕವಾದುದು.
   **C.** ಸ್ಪರ್ಧೆಯಿಂದ ದೂರವಿರುವುದು.
   **D.** ಹೊಂದಾಣಿಕೆಯಿಂದ ದೂರವಿರುವುದು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 8x1=8**

9. ವಿಕಾಸವಾದವನ್ನು ಮಂಡಿಸಿದವರು ಯಾರು?
10. ಕೃಷ್ಣದೇವರಾಯನು 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನು ಧರಿಸಲು ಕಾರಣವೇನು?
11. ನಿರುದ್ಯೋಗ ಎಂದರೇನು?
12. 2011ರ ಜನಗತಿಯ ಪ್ರಕಾರ ಕರ್ನಾಟಕದ ಲಿಂಗಾನುಪಾತ 968. ಇಲ್ಲಿ 968 ಏನನ್ನು ಸೂಚಿಸುತ್ತದೆ?
13. ಸಾ.ಶ. 1453ರಲ್ಲಿ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವಿನ ವ್ಯಾಪಾರ ಸ್ಥಗಿತಗೊಂಡಿತು. ಏಕೆ?
14. ಪ್ರತಿ ವರ್ಷ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಹಿನ್ನಲೆಯೇನು?
15. ಸಾಮಾನ್ಯವಾಗಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. ಏಕೆ?
16. ವೈಯಕ್ತಿಕ ನಿರ್ಧಾರ ಮತ್ತು ಗುಂಪು ನಿರ್ಧಾರಗಳ ನಡುವಿನ ವ್ಯತ್ಯಾಸವೇನು?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 8x2=16**

17. ಶಂಕರಾಚಾರ್ಯರು ರಚಿಸಿದ ಯಾವುದಾದರೂ ನಾಲ್ಕು ಗ್ರಂಥಗಳನ್ನು ಹೆಸರಿಸಿ.
18. ಕಬೀರರ ಬೋಧನೆಗಳು ಯಾವುವು?
19. ಎನ್.ಸಿ.ಸಿ.ಯು ವಿದ್ಯಾರ್ಥಿಗಳಿಗೆ ಅನೇಕ ಸೌಲಭ್ಯಗಳನ್ನು ಪಡೆಯುವಂತೆ ಮಾಡುತ್ತದೆ. ಸಮರ್ಥಿಸಿ. ಅಥವಾ
    ರಾಷ್ಟ್ರೀಯ ಐಕ್ಯತೆಗೆ ಇರುವ ಅಡೆತಡೆಗಳನ್ನು ನಿವಾರಿಸಲು ಕೈಗೊಳ್ಳಬಹುದಾದ ಕ್ರಮಗಳೇನು?
20. ಜನರು ಇಂದು ಹೆಚ್ಚಾಗಿ ಆಧುನಿಕ ಕೇಂದ್ರ ಕುಟುಂಬಗಳನ್ನು ಬಯಸುತ್ತಾರೆ. ಏಕೆ? ಅಥವಾ
    ವ್ಯಕ್ತಿಯ ಜೀವನದಲ್ಲಿ ಸಾಮಾಜೀಕರಣ ಪ್ರಕ್ರಿಯೆಯು ಮಹತ್ವದ ಪಾತ್ರವಹಿಸುತ್ತದೆ. ಹೇಗೆ?
21. ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳಾವುವು?
22. ಪ್ರವಾಸವು ಅನೇಕ ಪ್ರಯೋಜನಗಳನ್ನುಂಟು ಮಾಡುತ್ತದೆ. ಸ್ಪಷ್ಟೀಕರಿಸಿ.
23. ಜನಸಂಖ್ಯೆಯ ಗುಣಮಟ್ಟವನ್ನು ಹೆಚ್ಚಿಸಲು ಯಾವ ಕ್ರಮಗಳನ್ನು ಸೂಚಿಸುವಿರಿ?
24. ವ್ಯಾಪಾರದಲ್ಲಿ ಲೆಕ್ಕ ಬರಹದ ಅವಶ್ಯಕತೆ ಏನು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 9x3=27**

25. "ಏಸುಕ್ರಿಸ್ತರ ಬೋಧನೆಗಳು ಮಾನವ ಸಮಾಜಕ್ಕೆ ಶಾಂತಿ, ಕರುಣೆಯ ಭದ್ರ ಬುನಾದಿ ಹಾಕಿದವು". ಸಮರ್ಥಿಸಿ.
26. ವಿಜಯನಗರವು ಆರ್ಥಿಕವಾಗಿ ಸಮೃದ್ಧವಾಗಿತ್ತು. ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ. ಅಥವಾ
    ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು ಅಪಾರವಾದುದು. ಸಮರ್ಥಿಸಿ.
27. ಫ್ರಾನ್ಸಿನ ಕ್ರಾಂತಿಗೆ ಆರ್ಥಿಕ ಅಂಶಗಳು ಹೇಗೆ ಕಾರಣವಾದವು?
28. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?
29. ಬುಡಕಟ್ಟು ಸಮುದಾಯಗಳ ಲಕ್ಷಣಗಳನ್ನು ವಿವರಿಸಿ.
30. ಕರ್ನಾಟಕದ ಮಳೆಗಾಲವನ್ನು ಕುರಿತು ಬರೆಯಿರಿ.
31. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ರಸ್ತೆ ಸಾರಿಗೆ ಮತ್ತು ವಾಯು ಸಾರಿಗೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಹೇಗೆ? ಅಥವಾ
    ಬೃಹತ್ ಬೆಂಗಳೂರು ಭಾರತದ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿ ಹೊರಹೊಮ್ಮಿದೆ. ಏಕೆ?
32. ಸಂಪನ್ಮೂಲಗಳ ಕೊರತೆಯು ಅಧಿಕವಾಗುತ್ತಿರುವುದಕ್ಕೆ ಕಾರಣಗಳೇನು? ಅಥವಾ
    ಬಡತನ ನಿರ್ಮೂಲನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿ.
33. ನಿರ್ಧಾರ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಮುಖ್ಯ ಮೂಲಭೂತ ತತ್ವಗಳಾವುವು? ಅಥವಾ
    ವ್ಯವಹಾರ ಸಂಸ್ಥೆಗಳಿಗೆ ಹಣಕಾಸಿನ ಪ್ರಾಮುಖ್ಯತೆ ಮತ್ತು ಪಾತ್ರವನ್ನು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 4x4=16**

34. ಶಿವಾಜಿಯ ಆಡಳಿತ ವ್ಯವಸ್ಥೆಯನ್ನು ವಿವರಿಸಿ.
35. ಊಳಿಗಮಾನ್ಯ ಪದ್ಧತಿಯ ಗುಣಗಳನ್ನು ಪಟ್ಟಿ ಮಾಡಿ. ಅಥವಾ ಮತ ಸುಧಾರಣೆಯ ಪರಿಣಾಮಗಳಾವುವು?
36. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.
37. ಕರ್ನಾಟಕದಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ವಿವರಿಸಿ.

**VI. ೩೮.ಕರ್ನಾಟಕದ ನಕ್ಷೆ ಬರೆದು, ಈ ಕೆಳಗಿನವುಗಳನ್ನು ಗುರುತಿಸಿ. 1+4=5**

a) ರಾಣೆಬೆನ್ನೂರು
b) ಕಾವೇರಿ ನದಿ
c) ಕರ್ನಾಟಕದ ಹೆಬ್ಬಾಗಿಲು
d) ಕರ್ನಾಟಕದ ಮ್ಯಾಂಚೆಸ್ಟರ್

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

ತರಗತಿ: 9ನೇ ತರಗತಿ 2019–20 ವಿಷಯ: ಸಮಾಜ ವಿಜ್ಞಾನ

### a) ಸಾಮರ್ಥ್ಯವಾರು ಅಂಕ ಹಂಚಿಕೆ

| | ಸಾಮರ್ಥ್ಯ | ಅಂಕ | ಶೇಕಡವಾರು |
|---|---|---|---|
| 01 | ಸ್ಮರಣೆ | 13 | 16% |
| 02 | ತಿಳುವಳಿಕೆ | 40 | 50% |
| 03 | ಅನ್ವಯ | 22 | 28% |
| 04 | ಕೌಶಲ | 05 | 06% |

### b) ಕ್ಲಿಷ್ಟಾನುಸಾರ ಅಂಕ ಹಂಚಿಕೆ

| | | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 24 | 30% |
| 02 | ಸಾಮಾನ್ಯ | 40 | 50% |
| 03 | ಕಠಿಣ | 16 | 20% |

### c) ಪ್ರಶ್ನಾನುಸಾರ ಅಂಕ ಹಂಚಿಕೆ

| | ಪ್ರಶ್ನೆಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹುಆಯ್ಕೆ ಪ್ರಶ್ನೆಗಳು | 8 x 1 | 08 |
| 02 | ಕಿರು ಉತ್ತರದ ಪ್ರಶ್ನೆಗಳು | 8 x 1 | 08 |
| 03 | ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು | 8 x 2 | 16 |
| 04 | ದೀರ್ಘ ಉತ್ತರದ ಪ್ರಶ್ನೆಗಳು–1 | 9 x 3 | 27 |
| 05 | ದೀರ್ಘ ಉತ್ತರದ ಪ್ರಶ್ನೆಗಳು–2 | 4 x 4 | 16 |
| 06 | ನಕ್ಷೆ | 1 x 5 | 05 |
| | ಒಟ್ಟು | 38 | 80 |

### d) ಥೀಮ್ ಅನುಸಾರ (ವಿಭಾಗವಾರು) ಅಂಕ ಹಂಚಿಕೆ

| | ಪ್ರಶ್ನೆಗಳ ಮಾದರಿಗಳು | ಬ.ಪ್ರ | ಕಿ.ಉ.ಪ್ರ | ಸ.ಉ.ಪ್ರ | ದೀ.ಉ.ಪ್ರ1 | ದೀ.ಉ..ಪ್ರ2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 2 | 2 | 2 | 3 | 2 | – | 11 | 25 |
| 02 | ರಾಜ್ಯಶಾಸ್ತ್ರ | 1 | 1 | 1 | 1 | 1 | – | 05 | 11 |
| 03 | ಸಮಾಜಶಾಸ್ತ್ರ | 2 | 1 | 1 | 1 | – | – | 05 | 08 |
| 04 | ಭೂಗೋಳಶಾಸ್ತ್ರ | 1 | 2 | 2 | 2 | 1 | 1 | 09 | 22 |
| 05 | ಅರ್ಥಶಾಸ್ತ್ರ | 1 | 1 | 1 | 1 | – | – | 04 | 07 |
| 06 | ವ್ಯವಹಾರ ಅಧ್ಯಯನ | 1 | 1 | 1 | 1 | – | – | 04 | 07 |
| | ಒಟ್ಟು | 08 | 08 | 08 | 09 | 04 | 01 | 38 | 80 |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ. | ಘಟಕಗಳು | ಸ್ಮರಣೆ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | | | | | ಒಟ್ಟು ಪ್ರಶ್ನೆ ಗಳು | ಒಟ್ಟು ಅಂಕ ಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | MCQ | 1 | 2 | 3 | 4 | MCQ | 1 | 2 | 3 | 4 | MCQ | 1 | 2 | 3 | 4 | 1 | 2 | 3 | 4 | 5 | | |
| | ಇತಿಹಾಸ | | | | | | | | | | | | | | | | | | | | | | |
| 1 | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು | | | | | | | | | | | | | | 3(1) | | | | | | | 1 | 3 |
| 2 | ಮಧ್ಯಕಾಲೀನ ಭಾರತ & ರಾಜಕೀಯ ಸಂಕ್ರಮಣ | | | | | | | | | | | | | | 3(1) | | | | | | | 1 | 3 |
| 3 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | | | 2(1) | | | | | | | | 1(1) | | | | | | | | | | 2 | 3 |
| 4 | ವಿಜಯನಗರ ಮತ್ತು ಬಹಮನಿ ರಾಜ್ಯ | | | | | | | 1(1) | | | | | | | 3(1) | | | | | | | 1 | 1 |
| 5 | ಮೊಘಲರು ಮತ್ತು ಮರಾಠರು | | | | | | | | | | 4(1) | | | | | | | | | | | 1 | 4 |
| 6 | ಭಕ್ತಿ ಪಂಥ | | | 2(1) | | | | | | | | | | | | | | | | | | 1 | 2 |
| 7 | ಮಧ್ಯಯುಗದ ಯುರೋಪ | | | | | | | | | | 4(1) | | | | | | | | | | | 2 | 5 |
| 8 | ಆಧುನಿಕ ಯುರೋಪ್ | | | | | | | 1(1) | | | 4(1) | | | | | | | | | | | | |
| 9 | ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ | | | | | | | | | 3(1) | | 1(1) | | | | | | | | | | 2 | 4 |
| | ರಾಜ್ಯಶಾಸ್ತ್ರ | | | | | | | | | | | | | | | | | | | | | | |
| 1 | ನಮ್ಮ ಸಂವಿಧಾನ | | | | | | | | | | 4(1) | | | | | | | | | | | 1 | 4 |
| 2 | ಕೇಂದ್ರ ಸರ್ಕಾರ | | | | 3(1) | | | | | | | | | | | | | | | | | 1 | 3 |
| 3 | ರಾಜ್ಯ ಸರ್ಕಾರ | | | | | | 1(1) | | | | | | | | | | | | | | | 1 | 1 |
| 4 | ನ್ಯಾಯಾಂಗ ವ್ಯವಸ್ಥೆ | | | | | | | | | | | | | | | | | | | | | – | – |
| 5 | ಭಾರತದ ಚುನಾವಣಾ ವ್ಯವಸ್ಥೆ | | | | | | | | | | | | 1(1) | | | | | | | | | 1 | 1 |
| 6 | ದೇಶದ ರಕ್ಷಣೆ | | | | | | | | | | | | | 2(1) | | | | | | | | 1 | 2 |
| 7 | ರಾಷ್ಟ್ರೀಯ ಭಾವೈಕ್ಯತೆ | | | | | | | | | | | | | 2(1) | | | | | | | | | |
| | ಸಮಾಜಶಾಸ್ತ್ರ | | | | | | | | | | | | | | | | | | | | | | |
| 1 | ಕುಟುಂಬ | | | | | | | | | | | | | 2(1) | | | | | | | | 1 | 2 |
| 2 | ಸಾಮಾಜೀಕರಣ | | | | | | | | | | | | | 2(1) | | | | | | | | | |
| 3 | ಸಾಮಾಜಿಕ ಬದಲಾವಣೆ | | 1(1) | | | | 1(1) | | | | | | | | | | | | | | | 2 | 2 |
| 4 | ಸಮುದಾಯ | 1(1) | | | | | | | | 3(1) | | | | | | | | | | | | 2 | 4 |

| ಕ್ರ. ಸಂ. | ಘಟಕಗಳು | ಸ್ಮರಣೆ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | | | | | ಒಟ್ಟು ಪ್ರಶ್ನೆ ಗಳು | ಒಟ್ಟು ಅಂಕ ಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | MCQ | 1 | 2 | 3 | 4 | MCQ | 1 | 2 | 3 | 4 | MCQ | 1 | 2 | 3 | 4 | 1 | 2 | 3 | 4 | 5 | | |
| | ಭೂಗೋಳಶಾಸ್ತ್ರ | | | | | | | | | | | | | | | | | | | | | | |
| 1 | ನಮ್ಮ ರಾಜ್ಯ – ಕರ್ನಾಟಕ | | | | | | | 1(1) | | | | | | | | | | | | | | 1 | 1 |
| 2 | ಪ್ರಾಕೃತಿಕ ವಿಭಾಗಗಳು | | | 2(1) | | | | | | | | | | | | | | | | | | 1 | 2 |
| 3 | ಕರ್ನಾಟಕದ ವಾಯುಗುಣ | | | | | | | | | 3(1) | | | | | | | | | | | 1* | 1 | 4 |
| 4 | ಕರ್ನಾಟಕದ ಜಲಸಂಪನ್ಮೂಲಗಳು | | | | | | 1(1) | | | | | | | | | | | | | | 1* | 1 | 2 |
| 5 | ಕರ್ನಾಟಕದ ಭೂ ಸಂಪತ್ತು | | | | | | | | | | 4(1) | | | | | | | | | | | 1 | 4 |
| 6 | ಖನಿಜ ಸಂಪನ್ಮೂಲಗಳು | | | | | | | | | | | | | | | | | | | | 1* | 1 | 1 |
| 7 | ಸಾರಿಗೆ | | | | | | | | | | | | | | 3(1) | | | | | | 1* | 1 | 5 |
| 8 | ಕರ್ನಾಟಕದ ಕೈಗಾರಿಕೆಗಳು | | | | | | | | | | | | | | 3(1) | | | | | | 1* | | |
| 9 | ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು | | | | | | | | | | | | | 2(1) | | | | | | | | 1 | 2 |
| 10 | ಕರ್ನಾಟಕದ ಜನಸಂಖ್ಯೆ | | | | | | | 1(1) | | | | | | | | | | | | | | 1 | 1 |
| | ಅರ್ಥಶಾಸ್ತ್ರ | | | | | | | | | | | | | | | | | | | | | | |
| 1 | ನೈಸರ್ಗಿಕ ಸಂಪನ್ಮೂಲಗಳು | | | | | | | | | 3(1) | | | | | | | | | | | | 1 | 3 |
| 2 | ಭಾರತದ ಮಾನವ ಸಂಪನ್ಮೂಲಗಳು | | | | | | | | | | | | | 2(1) | | | | | | | | 1 | 2 |
| 3 | ಬಡತನ ಮತ್ತು ಹಸಿವು | 1(1) | | | | | | | | 3(1) | | | | | | | | | | | | 1 | 1 |
| 4 | ಶ್ರಮ ಹಾಗೂ ಉದ್ಯೋಗ | | | | | | | 1(1) | | | | | | | | | | | | | | 1 | 1 |
| | ವ್ಯವಹಾರ ಅಧ್ಯಯನ | | | | | | | | | | | | | | | | | | | | | | |
| 1 | ವ್ಯವಹಾರ ನಿರ್ವಹಣೆ | | | | | | | 1(1) | | 3(1) | | | | | | | | | | | | 3 | 5 |
| 2 | ಹಣಕಾಸಿನ ನಿರ್ವಹಣೆ | 1(1) | | | | | | | | 3(1) | | | | | | | | | | | | | |
| 3 | ವ್ಯವಹಾರದಲ್ಲಿ ಲೆಕ್ಕ ಬರಹ | | | | | | | | | | | | | 2(1) | | | | | | | | 1 | 2 |
| | ಒಟ್ಟು | 1(3) | 1(1) | 2(3) | 3(1) | – | 1(3) | 1(6) | – | 3(5) | 4(4) | 1(2) | 1(1) | 2(5) | 3(3) | | | | | | 5(1) | 38 | 80 |

ಸೂಚನೆ : ಆವರಣದ ಹೊರಗಿನ ಸಂಖ್ಯೆಗಳು ಅಂಕಗಳನ್ನು ಹಾಗೂ ಆವರಣದ ಒಳಗಿನ ಅಂಕಿಗಳು ಪ್ರಶ್ನೆಗಳ ಸಂಖ್ಯೆಯನ್ನು ಸೂಚಿಸುತ್ತವೆ.

# ಪ್ರಶ್ನೆ ಪತ್ರಿಕೆ ವಿಶ್ಲೇಷಣೆ

| ಪ್ರಶ್ನೆ ಸಂಖ್ಯೆ | ಘಟಕ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಕಾಲ | ಪ್ರಶ್ನೆಯ ಕ್ಲಿಷ್ಟತೆ |
|---|---|---|---|---|---|---|---|
| 1 | ಹಣಕಾಸಿನ ನಿರ್ವಹಣೆ | ಸ್ಮರಣೆ | ಸ್ಮರಿಸುವನು | ಬಹುಆಯ್ಕೆ | 1 | 2ನಿ | ಸುಲಭ |
| 2 | ಬಡತನ ಮತ್ತು ಹಸಿವು | ಸ್ಮರಣೆ | ಹೆಸರಿಸುವನು | ಬಹುಆಯ್ಕೆ | 1 | 2ನಿ | ಸುಲಭ |
| 3 | ಕರ್ನಾಟಕದ ಜಲಸಂಪನ್ಮೂಲಗಳು | ತಿಳುವಳಿಕೆ | ಕಾರಣ ಕೊಡುವನು | ಬಹುಆಯ್ಕೆ | 1 | 2ನಿ | ಸಾಧಾರಣ |
| 4 | ಸಮುದಾಯ | ಸ್ಮರಣೆ | ಸ್ಮರಿಸುವನು | ಬಹುಆಯ್ಕೆ | 1 | 2ನಿ | ಸುಲಭ |
| 5 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | ಅನ್ವಯ | ವಿಶ್ಲೇಷಿಸುವನು | ಬಹುಆಯ್ಕೆ | 1 | 2ನಿ | ಕಠಿಣ |
| 6 | ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ | ಅನ್ವಯ | ಸ್ಪಷ್ಟೀಕರಿಸುವನು | ಬಹುಆಯ್ಕೆ | 1 | 2ನಿ | ಸಾಧಾರಣ |
| 7 | ರಾಜ್ಯ ಸರ್ಕಾರ | ತಿಳುವಳಿಕೆ | ಸಂಬಂಧಿಕರಿಸುವನು | ಬಹುಆಯ್ಕೆ | 1 | 2ನಿ | ಸಾಧಾರಣ |
| 8 | ಸಾಮಾಜಿಕ ಬದಲಾವಣೆ | ತಿಳುವಳಿಕೆ | ಅರ್ಥೈಸುವನು | ಬಹುಆಯ್ಕೆ | 1 | 2ನಿ | ಸಾಧಾರಣ |
| 9 | ಸಾಮಾಜಿಕ ಬದಲಾವಣೆ | ಸ್ಮರಣೆ | ಹೆಸರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸುಲಭ |
| 10 | ವಿಜಯನಗರ ಮತ್ತು ಬಹಮನಿ ರಾಜ್ಯ | ತಿಳುವಳಿಕೆ | ಕಾರಣ ಕೊಡುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸಾಧಾರಣ |
| 11 | ಶ್ರಮ ಹಾಗೂ ಉದ್ಯೋಗ | ತಿಳುವಳಿಕೆ | ವಿವರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸಾಧಾರಣ |
| 12 | ಕರ್ನಾಟಕದ ಜನಸಂಖ್ಯೆ | ತಿಳುವಳಿಕೆ | ಅರ್ಥೈಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಕಠಿಣ |
| 13 | ಆಧುನಿಕ ಯುರೋಪ್ | ತಿಳುವಳಿಕೆ | ಕಾರಣ ಕೊಡುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಕಠಿಣ |
| 14 | ನಮ್ಮ ರಾಜ್ಯ – ಕರ್ನಾಟಕ | ತಿಳುವಳಿಕೆ | ಸಂಬಂಧಿಕರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸಾಧಾರಣ |
| 15 | ಭಾರತದ ಚುನಾವಣಾ ವ್ಯವಸ್ಥೆ | ಅನ್ವಯ | ಸ್ಪಷ್ಟೀಕರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸಾಧಾರಣ |
| 16 | ವ್ಯವಹಾರ ನಿರ್ವಹಣೆ | ತಿಳುವಳಿಕೆ | ವ್ಯತ್ಯಾಸ ತಿಳಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸಾಧಾರಣ |
| 17 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | ಸ್ಮರಣೆ | ಹೆಸರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸುಲಭ |
| 18 | ಭಕ್ತಿ ಪಂಥ | ಸ್ಮರಣೆ | ಸ್ಮರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸುಲಭ |
| 19 | ದೇಶದ ರಕ್ಷಣೆ | ಅನ್ವಯ | ಸಮರ್ಥಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5ನಿ | ಕಠಿಣ |
| | ರಾಷ್ಟ್ರೀಯ ಭಾವೈಕ್ಯತೆ | | ತೀರ್ಮಾನಿಸುವನು | | | | |
| 20 | ಕುಟುಂಬ | ಅನ್ವಯ | ವಿಶ್ಲೇಷಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5ನಿ | ಕಠಿಣ |
| | ಸಾಮಾಜೀಕರಣ | | ಸಮರ್ಥಿಸುವನು | | | | |
| 21 | ಪ್ರಾಕೃತಿಕ ವಿಭಾಗಗಳು | ಸ್ಮರಣೆ | ಸ್ಮರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸುಲಭ |

| | | | | | | | |
|---|---|---|---|---|---|---|---|
| 22 | ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು | ಅನ್ವಯ | ಸ್ಪಷ್ಟೀಕರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಕಠಿಣ |
| 23 | ಭಾರತದ ಮಾನವ ಸಂಪನ್ಮೂಲಗಳು | ಅನ್ವಯ | ತೀರ್ಮಾನಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5ನಿ | ಕಠಿಣ |
| 24 | ವ್ಯವಹಾರದಲ್ಲಿ ಲೆಕ್ಕ ಬರಹ | ಅನ್ವಯ | ವಿಶ್ಲೇಷಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಕಠಿಣ |
| 25 | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು | ಅನ್ವಯ | ಸಮರ್ಥಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸಾಧಾರಣ |
| 26 | ವಿಜಯನಗರ ಮತ್ತು ಬಹಮನಿ ರಾಜ್ಯ | ಅನ್ವಯ | ಸ್ಪಷ್ಟೀಕರಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಕಠಿಣ |
| | ಮಧ್ಯಕಾಲೀನ ಭಾರತ ಮತ್ತು ರಾಜಕೀಯ ಸಂಕ್ರಮಣ | | ಸಮರ್ಥಿಸುವನು | | | | |
| 27 | ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ | ತಿಳುವಳಿಕೆ | ಕಾರಣ ನೀಡುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸಾಧಾರಣ |
| 28 | ಕೇಂದ್ರ ಸರ್ಕಾರ | ಸ್ಮರಣೆ | ಸ್ಮರಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸುಲಭ |
| 29 | ಸಮುದಾಯ | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸುಲಭ |
| 30 | ಕರ್ನಾಟಕದ ವಾಯುಗುಣ | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸಾಧಾರಣ |
| 31 | ಸಾರಿಗೆ | ಅನ್ವಯ | ಸ್ಪಷ್ಟೀಕರಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸಾಧಾರಣ |
| | ಕರ್ನಾಟಕದ ಕೈಗಾರಿಕೆಗಳು | | ವಿಶ್ಲೇಷಿಸುವನು | | | | |
| 32 | ನೈಸರ್ಗಿಕ ಸಂಪನ್ಮೂಲಗಳು | ತಿಳುವಳಿಕೆ | ಕಾರಣ ನೀಡುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸುಲಭ |
| | ಬಡತನ ಮತ್ತು ಹಸಿವು | ತಿಳುವಳಿಕೆ | ಪಟ್ಟಿ ಮಾಡುವನು | | | | |
| 33 | ವ್ಯವಹಾರ ನಿರ್ವಹಣೆ | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ-1 | 3 | 7ನಿ | ಸಾಧಾರಣ |
| | ಹಣಕಾಸಿನ ನಿರ್ವಹಣೆ | | ವಿವರಿಸುವನು | | | | ಸಾಧಾರಣ |
| 34 | ಮೊಘಲರು ಮತ್ತು ಮರಾಠರು | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ-2 | 4 | 10ನಿ | ಸಾಧಾರಣ |
| 35 | ಮಧ್ಯಯುಗದ ಯುರೋಪ | ತಿಳುವಳಿಕೆ | ಪಟ್ಟಿ ಮಾಡುವನು | ದೀರ್ಘಉತ್ತರದ ಪ್ರಶ್ನೆ-2 | 4 | 10ನಿ | ಸಾಧಾರಣ |
| | ಆಧುನಿಕ ಯುರೋಪ್ | | ವಿವರಿಸುವನು | | | | |
| 36 | ನಮ್ಮ ಸಂವಿಧಾನ | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ-2 | 4 | 10ನಿ | ಸಾಧಾರಣ |
| 37 | ಕರ್ನಾಟಕದ ಭೂ ಸಂಪತ್ತು | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ-2 | 4 | 10ನಿ | ಸಾಧಾರಣ |
| 10 | ಕರ್ನಾಟಕದ ವಾಯುಗುಣ | ಕೌಶಲ | ರಚಿಸುವನು/ಗುರುತಿಸುವನು | ನಕ್ಷೆ | 5 | 10ನಿ | ಸುಲಭ |
| | ಕರ್ನಾಟಕದ ಜಲಸಂಪನ್ಮೂಲಗಳು | | | | | | |
| | ಖನಿಜ ಸಂಪನ್ಮೂಲಗಳು | | | | | | |
| | ಸಾರಿಗೆ | | | | | | |
| | ಕರ್ನಾಟಕದ ಕೈಗಾರಿಕೆಗಳು | | | | | | |
| | ಒಟ್ಟು | | | | 80 | 180ನಿ | |


# ಮಾದರಿ ಉತ್ತರಗಳು

| | | |
|---|---|---|
| 1 | **C.** ಮುಂಬೈ | |
| 2 | **D.** ಸಂಧ್ಯಾ ಸುರಕ್ಷಾ ಯೋಜನೆ | |
| 3 | **B.** ಜೋಗ್ ಜಲಪಾತದಿಂದಾಗಿ | |
| 4 | **C.** ಗ್ರಾಮ ಸಮುದಾಯ | |
| 5 | **C.** ಜೀವ ಮತ್ತು ಪ್ರಕೃತಿ ಬ್ರಹ್ಮನ ಅಧೀನ. | |
| 6 | **A.** ಫ್ರಾನ್ಸ್ ಮಹಾಕ್ರಾಂತಿಗೆ ಪ್ರಚೋದನೆ ನೀಡಿತು. | |
| 7 | **D.** ವಿಧಾನಸಭೆಯ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖೆಯನ್ನು ಆಧರಿಸಿರುತ್ತದೆ. | |
| 8 | **B.** ಸಾರ್ವತ್ರಿಕವಾದುದು. | |
| 9 | ಡಾರ್ವಿನ್ | |
| 10 | ಕೃಷ್ಣದೇವರಾಯನು ಬಂಧನದಲ್ಲಿದ್ದ ಮಹಮ್ಮದ್ ಶಾಹನನ್ನು ಬಿಡುಗಡೆಗೊಳಿಸಿ ಬಹಮನಿ ರಾಜನನ್ನಾಗಿಸಿದ್ದರಿಂದ | |
| 11 | ಪ್ರಸ್ತುತ ಕೂಲಿ ದರದಲ್ಲಿ ಕೆಲಸ ಮಾಡಲು ಇಚ್ಚಿಸುವ ಒಬ್ಬ ವ್ಯಕ್ತಿಗೆ ಕೆಲಸ ದೊರಕದೇ ಇರುವ ಸ್ಥಿತಿ | |
| 12 | 1000 ಪುರುಷರಿಗಿರುವ ಮಹಿಳೆಯರ ಪ್ರಮಾಣವನ್ನು ಸೂಚಿಸುತ್ತದೆ. | |
| 13 | ಸಾ.ಶ. 1453ರಲ್ಲಿ ಟರ್ಕರು ಕಾನ್ಸಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡಿದ್ದರಿಂದ | |
| 14 | 1956 ನವೆಂಬರ್ 1 ರಂದು ವಿಶಾಲ ಮೈಸೂರು ರಾಜ್ಯ (ಕರ್ನಾಟಕ) ಅಸ್ತಿತ್ವಕ್ಕೆ ಬಂದಿತು | |
| 15 | 18ವರ್ಷದ ಒಳಗಿನ ವಯೋಮಿತಿಯನ್ನು ಹೊಂದಿರುತ್ತಾರೆ | |
| 16 | ವೈಯಕ್ತಿಕ ನಿರ್ಧಾರಗಳಲ್ಲಿ ಏಕ ಒಡೆತನರೂಪವಾದ ಸಣ್ಣ ಪ್ರಮಾಣದ ವ್ಯವಹಾರ ಸಂಘಟನೆಗಳಲ್ಲಿ ಒಬ್ಬ ವ್ಯಕ್ತಿ ನಿರ್ಧಾರ ತೆಗೆದುಕೊಳ್ಳುತ್ತಾನೆ. ಒಂದು ತಂಡ ತೆಗೆದುಕೊಳ್ಳುವ ನಿರ್ಧಾರಗಳು ಗುಂಪು ನಿರ್ಧಾರಗಳಾಗಿರುತ್ತವೆ. | |
| 17 | ಶಂಕರಭಾಷ್ಯ, ಆನಂದಲಹರಿ, ಸೌಂದರ್ಯ ಲಹರಿ, ಶಿವಾನಂದ ಲಹರಿ, ವಿವೇಖ ಚೂಡಾಮಣಿ, ಪ್ರಬುದ್ಧ ಸುಧಾಕರ, ದಕ್ಷಿಣಾಮೂರ್ತಿ ಸ್ತೋತ್ರ, ಭಜಗೋವಿಂದಂ ಸ್ತೋತ್ರ (ಯಾವುದಾದರೂ ನಾಲ್ಕು) | |
| 18 | ❖ ಜಾತಿವ್ಯವಸ್ಥೆ ಮತ್ತು ಬಹುಮೂರ್ತಿಗಳ ಪೂಜೆಯನ್ನು ಖಂಡಿಸಿದರು.<br>❖ ಅವರು ದೇವರು ಒಬ್ಬನೇ, ಹಿಂದೂ ಮತ್ತು ಮುಸಲ್ಮಾನರಿಗೆ ಆ ಒಬ್ಬ ದೇವರೇ ಹೊರತು ಬೇರೆ ಬೇರೆ ಇಲ್ಲವೆಂದು ಸಾರಿದರು.<br>❖ ಈ ಎರಡು ಮತೀಯರಲ್ಲಿಯೂ ಸೌಹಾರ್ದ ಮತ್ತು ಸಹಿಷ್ಣುತೆಯನ್ನು ಬೆಳೆಸಲು ಯತ್ನಿಸಿದರು. | |
| 19 | ❖ ಎನ್.ಸಿ.ಸಿ. ತರಬೇತಿ ಪಡೆದವರಿಗೆ ರಕ್ಷಣಾ ಸೇನೆಗಳಿಗೆ ಸೇರಲು ವಿಶೇಷ ಅವಕಾಶ.<br>❖ ತರಬೇತಿಯಲ್ಲಿ ವಿಶಿಷ್ಠ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ವೃತ್ತಿಪರ ಕಾಲೇಜುಗಳಲ್ಲಿ ಮೀಸಲಾತಿ ಸೌಲಭ್ಯ.<br>❖ ತರಬೇತಿಯಲ್ಲಿ ಆಯುಧ ಶಿಕ್ಷಣ ನೀಡುವುದು.<br>❖ ದೂರ ನಡಿಗೆ (ಹೈಕಿಂಗ್)<br>❖ ಸಾಹಸ ಪ್ರಯಾಣ (ಟ್ರೆಕಿಂಗ್)<br>❖ ಜಾರಾಟ (ಗ್ಲೈಡಿಂಗ್)<br>❖ ಪರ್ವತಾರೋಹಣ (ಸ್ಕೇಲಿಂಗ್) | ❖ ಪ್ರತಿಯೊಂದು ವರ್ಗವು ಇನ್ನೊಂದು ವರ್ಗವನ್ನು, ಮತ ಬೋಧಕರನ್ನು ಗೌರವಿಸಬೇಕು, ಪ್ರೀತಿಸಬೇಕು.<br>❖ ಪ್ರತಿಯೊಂದು ಧರ್ಮದ ಪವಿತ್ರ ದಿನಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಪರಸ್ಪರ ಸಹಕಾರ, ಸಹಾಯ ಮತ್ತು ಅಭಿನಂದನೆಗಳಿರಬೇಕು.<br>❖ ಯಾವುದೇ ಒಂದು ಮತೀಯ ಗುಂಪು ಇತರೆ ಮತದ ಗುಂಪಿನ ಬಗ್ಗೆ ಉದಾಸೀನತೆ ಹೊಂದಿರಬಾರದು.<br>❖ ವೃತ್ತಿ ಶಿಕ್ಷಣವನ್ನು ಹೆಚ್ಚು ಹೆಚ್ಚು ನೀಡಬೇಕು.<br>❖ ಶಾಲೆ ಬಿಡುವ ಮಕ್ಕಳನ್ನು ನಿಯಂತ್ರಿಸಬೇಕು. |
| 20 | ❖ ವೈಯಕ್ತಿಕತೆ,<br>❖ ವೈಯಕ್ತಿಕ ಸಂತೋಷ,<br>❖ ಸುಖ,<br>❖ ಆಸ್ತಿಯ ಹಕ್ಕು<br>❖ ಬದಲಾದ ಸಾಮಾಜಿಕ ಮೌಲ್ಯಗಳು,<br>❖ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆದ ಪ್ರಗತಿ, ನಗರೀಕರಣ,<br>❖ ಪ್ರಜಾಸತಾತ್ಮಕ ಹಾಗೂ<br>❖ ಸಮಾನತೆಯ ತತ್ವಗಳು | ❖ ಮಾನವ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿಸುತ್ತದೆ.<br>❖ ವಿವಿಧ ಕೌಶಲ್ಯಗಳ ಕಲಿಕೆ ಮತ್ತು ಅಳವಡಿಕೆಗೆ ಅವಕಾಶ ಒದಗಿಸುತ್ತದೆ.<br>❖ ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಬದ್ಧತೆ ಮತ್ತು ಬೆಂಬಲವನ್ನು ನೀಡುತ್ತದೆ.<br>❖ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯ ಮಾಡುತ್ತದೆ.<br>❖ ಪರಂಪರೆಯ ಮುಂದುವರಿಕೆಗೆ ಸಹಕಾರಿಯಾಗಿದೆ. |
| 21 | ❖ ಚಾರ್ಮಾಡಿ ಘಾಟಿ<br>❖ ಶಿರಾಡಿ ಘಾಟಿ<br>❖ ಆಗುಂಬೆ ಘಾಟಿ<br>❖ ಹುಲಿಕಲ್ ಘಾಟಿ | |
| 22 | ❖ ವ್ಯಾಪಾರ ವಹಿವಾಟಿಗಳಿಗೆ ಅನುಕೂಲವಾಗಿದೆ. | |

<table>
<tr><td></td><td colspan="2">❖ ಕುತೂಹಲಕ್ಕಾಗಿ, ಧಾರ್ಮಿಕ ಆಚರಣೆ, ಮನಃಶಾಂತಿಯುಂಟಾಗುತ್ತದೆ.<br>❖ ವಿಹಾರ, ಸುಂದರ ತಾಣಗಳನ್ನು ನೋಡುವ ಹಂಬಲ ತನಿಸುತ್ತದೆ.<br>❖ ಸಂತೋಷದ ಜೊತೆ ಆರೋಗ್ಯ ವೃದ್ಧಿಯಾಗುತ್ತದೆ.<br>❖ ಪ್ರವಾಸದಿಂದ ನಾಡು, ನುಡಿ, ಸಂಸ್ಕøತಿ, ನಾಗರಿಕತೆ, ಜನಜೀವನದ ಕ್ರಮ ಮುಂತಾದವುಗಳನ್ನು ತಿಳಿಯುವುದು<br>❖ ಸಾಧ್ಯವಾಗುತ್ತದೆ.</td></tr>
<tr><td>23</td><td colspan="2">❖ ಆರೋಗ್ಯ ಮತ್ತು ಪೌಷ್ಟಿಕತೆಗೆ ಹೆಚ್ಚು ಗಮನ ನೀಡುವುದು.<br>❖ ತಾಯಿ ಮತ್ತು ಮಗುವಿನ ಸೂಕ್ತ ಆರೈಕೆ<br>❖ ರೋಗಗಳ ನಿಯಂತ್ರಣಕ್ಕಾಗಿ ಲಸಿಕೀಕರಣ<br>❖ ನುರಿತ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಹೆರಿಗೆ ಮಾಡಿಸುವುದು<br>❖ ಆರೋಗ್ಯ ಸೌಲಭ್ಯಗಳನ್ನು ಸೃಷ್ಟಿಸುವುದು</td></tr>
<tr><td>24</td><td colspan="2">❖ ಒಂದು ನಿರ್ದಿಷ್ಟ ಅವಧಿಗೆ ವ್ಯಾಪಾರ ಸಂಘಟನೆಯು ಗಳಿಸಿದ ನಿವ್ವಳ ಲಾಭ ಎಷ್ಟು ಅಥವಾ ಅನುಭವಿಸಿದ ನಷ್ಟ ಎಷ್ಟೆಂಬುದನ್ನು ತಿಳಿದುಕೊಳ್ಳಲು<br>❖ ಇತರರಿಂದ ಬರಬೇಕಾದ ಹಣ ಎಷ್ಟು ಮತ್ತು ಇತರರಿಗೆ ಕೊಡಬೇಕಾದ ಹಣ ಎಷ್ಟು ಎಂಬುದನ್ನೂ ಸಹ ತಿಳಿದುಕೊಳ್ಳಲು<br>❖ ವಹಿವಾಟುಗಳ ಪರಿಣಾಮಗಳನ್ನು ತಿಳಿದುಕೊಳ್ಳಲು<br>❖ ಒಂದು ಅವಧಿಯಲ್ಲಿ ಸಂಸ್ಥೆ ಗಳಿಸಿದ ಲಾಭ ಅಥವಾ ಅನುಭವಿಸಿದ ನಷ್ಟ ಎಷ್ಟು ಎಂಬುದನ್ನು ತಿಳಿದುಕೊಳ್ಳಲು</td></tr>
<tr><td>25</td><td colspan="2">❖ ದೇವರು ಒಬ್ಬನೇ, ದಯಾಮಯನಾದ ದೇವರು ಸರ್ವ ಜೀವರಾಶಿಗಳ ತಂದೆ.<br>❖ ಪ್ರತಿಯೊಬ್ಬರಲ್ಲಿ ಸಹೋದರತ್ವ ಭಾವನೆಯಿರಬೇಕು.<br>❖ ನಾವು ಕಷ್ಟದಲ್ಲಿರುವವರನ್ನು ಪ್ರೀತಿಸಿದರೆ ದೇವರನ್ನು ಪ್ರೀತಿಸಿದಂತೆ .<br>❖ ಪರರಿಂದ ಯಾವುದನ್ನು ಬಯಸದೇ ನಾವು ಅವರ ಸೇವೆಯನ್ನು ಮಾಡಬೇಕು.<br>❖ ಮಾನವನ ಸೇವೆಯು ದೇವರ ಸೇವೆಗೆ ಸಮಾನವಾದುದು.<br>❖ ಮಾನವನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ, ಅದಕ್ಕೆ ದೇವರಿಂದ ಕ್ಷಮಾಪಣೆ ಇದೆ.</td></tr>
<tr><td>26</td><td>❖ ವಿಜಯನಗರವು ಆರ್ಥಿಕವಾಗಿ ಸಮೃದ್ಧವಾಗಿತ್ತು.<br>❖ ಭೂ ಕಂದಾಯ ರಾಜ್ಯದ ಆದಾಯದ ಪ್ರಮುಖ ಮೂಲವಾಗಿತ್ತು.<br>❖ ಕೃಷಿಕರು ಸಾಮಾನ್ಯವಾಗಿ ತಮ್ಮ ಉತ್ಪಾದನೆಯ ನಾಲ್ಕನೆಯ ಒಂದು ಭಾಗವನ್ನು ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಕೊಡುತ್ತಿದ್ದರು. ವೃತ್ತಿ<br>❖ ತೆರಿಗೆಗಳು, ಸಾಮಂತರಿಂದ ಬರುವ ಕಪ್ಪಕಾಣಿಕೆಗಳು ರಾಜ್ಯದ ಇತರ ಆದಾಯದ ಮೂಲಗಳಾಗಿದ್ದವು.<br>❖ ಕೃಷಿ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿತ್ತು.<br>❖ ಜೋಳ, ರಾಗಿ, ಭತ್ತ, ಸಜ್ಜೆ, ಗೋಧಿ, ಅವರೆ, , ಹತ್ತಿ, ಕಬ್ಬು, ತೆಂಗು ಮುಖ್ಯ ಬೆಳೆಗಳಾಗಿದ್ದವು.<br>❖ ಬಾವಿ, ಕೆರೆ–ಕಾಲುವೆಗಳನ್ನು ಕಟ್ಟಿಸಿದರು<br>❖ ಇವರ ಕಾಲದಲ್ಲಿ ಗೇಣಿ, ಗುತ್ತಿಗೆ, ಸಿದ್ಧಾಯ, ವಾರ ಮತ್ತು ಗಡಿ ಎಂಬ ಐದು ಬಗೆಯ ಭೂ ಹಿಡುವಳಿ ಪದ್ಧತಿಗಳಿದ್ದವು.<br>❖ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿತ್ತು.<br>❖ ಮಸಾಲೆ ಸಾಮಾನುಗಳು, ಪೆಟ್ಲುಪ್ಪು ಕಬ್ಬಿಣದ ಅದಿರು, ಶ್ರೀಗಂಧ, ಸುಗಂಧ ದ್ರವ್ಯ ಮುಂತಾದವುಗಳನ್ನು ರಫ್ತು ಮಾಡುತ್ತಿದ್ದರು.<br>❖ ಬಟ್ಟೆ ನೇಯ್ಗೆಯ ಮುಖ್ಯ ಕೈಗಾರಿಕೆಗಳು ಇದ್ದವು.<br>❖ ಚಿನ್ನದ ವರಹ, ಗದ್ಯಾಣ ಮತ್ತು ಪಗೋಡ, ಬೆಳ್ಳಿಯ ತಾರಾ, ತಾಮ್ರದ ಪಣ, ದುಡ್ಡು ಮತ್ತು ಕಾಸುಗಳು ಬಳಕೆಯಲ್ಲಿದ್ದವು.</td><td>❖ ರಜಪೂತ ಅರಸರು ಸ್ವತಃ ವಿದ್ವಾಂಸರು ಆಗಿದ್ದಾರೆ.<br>❖ ಭೋಜ, ಮುಂಜ, ಮೊದಲಾದ ಅರಸರೇ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.<br>❖ ಮುಂಜ ರಾಜನು ಪದ್ಮಗುಪ್ತ, ಹಲಾಯುಧ ಎಂಬ ಕವಿಗಳಿಗೆ ಆಶ್ರಯ ನೀಡಿದ್ದನು.<br>❖ ಭೋಜ ರಾಜನ ಕಾಲದಲ್ಲಿ ಶಾಂತಿಸೇನ, ಪ್ರಭಾಚಂದ್ರ ಸೂರಿ, ಧನಪಾಲ ಎಂಬ ಜೈನ ಪಂಡಿತರು ಆಶ್ರಯ ಪಡೆದಿದ್ದರು.<br>❖ ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ<br>❖ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು.<br>❖ ನಾಟಕಗಳಾದ ರಾಜಶೇಖರ ರಚಿಸಿದ 'ಬಾಲ ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ', ಹಾಗೂ 'ಉತ್ತರರಾಮಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವಿರಾಜ ವಿಜಯ' ಮತ್ತು ಹೇಮಚಂದ್ರನ 'ಕುಮಾರಪಾಲಚರಿತ' ಮಹತ್ವದ್ದಾಗಿವೆ.<br>❖ ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವಿರಾಜ ರಾಸೋ'ವನ್ನು ಚಂದ್ ಬರದಾಯಿ ಮತ್ತು 'ಭೋಜ ಪ್ರಬಂಧ'ವನ್ನು ಬಲ್ಲಾಳ ಎಂಬುವರು ರಚಿಸಿದರು.</td></tr>
<tr><td>27</td><td colspan="2">❖ ಫ್ರಾನ್ಸ್ ಕೃಷಿ ಪ್ರಧಾನವಾದ ದೇಶವಾಗಿತ್ತು.<br>❖ ಕೃಷಿ ಪದ್ಧತಿಯಲ್ಲಿ ಅಭಿವೃದ್ಧಿಗಳು ಆಗಿದ್ದರೂ ಸಹ, ಕೃಷಿ ಬಹಳ ಹಿಂದುಳಿದಿತ್ತು.<br>❖ ಭೂಮಿಯ ಉತ್ಪತ್ತಿ ಬಹಳ ಕಡಿಮೆ ಇತ್ತು. ರೈತರೇ ಹೆಚ್ಚಿನ ತೊಂದರೆಗೊಳಗಾಗಿದ್ದವರು.<br>❖ ಬರಗಾಲಗಳು ಸಾಮಾನ್ಯವಾಗಿದ್ದವು.<br>❖ ಇದರಿಂದ ಆಹಾರಕ್ಕಾಗಿ ದಂಗೆಗಳಾಗುತ್ತಿದ್ದವು.</td></tr>
</table>

| | | |
|---|---|---|
| | ❖ ಕೈಗಾರಿಕೆಗಳು ವೃತ್ತಿಸಂಘಗಳ ಅಧೀನದಲ್ಲಿದ್ದವು.<br>❖ ಆಂತರಿಕ ಅಡ್ಡಿಗಳಿಂದಲೂ ಮತ್ತು ಅಧಿಕಾರಿಗಳ ಅತಿಯಾದ ಮಧ್ಯ ಪ್ರವೇಶದಿಂದಲೂ ಅವುಗಳ ಬೆಳವಣಿಗೆ ಕುಂಠಿತಗೊಂಡಿತ್ತು.<br>❖ ಇದರ ಫಲವಾಗಿ ಉತ್ಪಾದನೆ ಕೆಳಮಟ್ಟದಲ್ಲಿತ್ತು. | |
| **28** | ❖ ಭಾರತದ ಪ್ರಜೆಯಾಗಿರಬೇಕು.<br>❖ ಕನಿಷ್ಠ 30 ವರ್ಷ ವಯೋಮಿತಿಯನ್ನು ಹೊಂದಿರಬೇಕು.<br>❖ ನ್ಯಾಯಾಂಗದ ಶಿಕ್ಷೆಗೆ ಒಳಗಾಗಿರಬಾರದು.<br>❖ ಮತಿಭ್ರಮಣೆಯುಳ್ಳವರಾಗಿರಬಾರದು.<br>❖ ಸಂಸತ್ತು ಕಾಲಕಾಲಕ್ಕೆ ನಿಗದಿಪಡಿಸುವ ಅರ್ಹತೆ ಪಡೆದಿರಬೇಕು. | |
| **29** | ❖ ಸರಳ ಮತ್ತು ಸ್ವಯಂ ಪರಿಪೂರ್ಣತೆ.<br>❖ ಪ್ರಕೃತಿಯ ಪೂಜೆ.<br>❖ ಸಮೂಹದ ಬಗ್ಗೆ ಅವರ ನಿಷ್ಠೆ ಮತ್ತು ಸಮಗ್ರತೆಗೆ ಮಹತ್ವ.<br>❖ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಸಮಾನತೆ.<br>❖ ಒಳಬಾಂಧವ್ಯ ವಿವಾಹ.<br>❖ ವಿಭಿನ್ನ ಮಾತೃಭಾಷೆ.<br>❖ ಪ್ರಾಕೃತಿಕ ಪರಿಸರದಲ್ಲಿಯೇ ವಾಸ.<br>❖ ಬೇಟೆ, ಸ್ವಲ್ಪ ಪ್ರಮಾಣದ ಕೃಷಿ, ಅರಣ್ಯ ಉಪ–ಉತ್ಪನ್ನಗಳ ಆರ್ಥಿಕ ವ್ಯವಸ್ಥೆ. | |
| **30** | ❖ ಇದನ್ನು 'ನೈಋತ್ಯ ಮಾನ್ಸೂನ್ ಮಾರುತಗಳ ಕಾಲ' ಎಂತಲೂ ಕರೆಯುತ್ತಾರೆ.<br>❖ ಅರಬ್ಬಿಸಮುದ್ರದ ಮೇಲಿಂದ ಬೀಸುವ ತೇವಾಂಶಭರಿತ ಮಾರುತಗಳನ್ನು ಮಲೆನಾಡು ಘಟ್ಟಗಳು ತಡೆದು ಅಧಿಕ ಮಳೆ ಸುರಿಸುತ್ತವೆ.<br>❖ ಪೂರ್ವದ ಕಡೆಗೆ ಹೋದಂತೆಲ್ಲಾ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ.<br>❖ ಹೀಗಾಗಿ ಪೂರ್ವದ ಮೈದಾನವು ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ.<br>❖ ಆಗುಂಬೆ ರಾಜ್ಯದ ಅಧಿಕ ಮಳೆ ಬೀಳುವ ಸ್ಥಳವಾಗಿದೆ. ಇದನ್ನು ದಕ್ಷಿಣದ ಚಿರಾಪುಂಜಿ ಎನ್ನುವರು. ಚಿತ್ರದುರ್ಗದ ಚಳ್ಳಕೆರೆ ಸಮೀಪದ ನಾಯಕನ ಹಟ್ಟಿ ಅತಿ ಕಡಿಮೆ ಮಳೆ ಬೀಳುವ ಸ್ಥಳ.<br>❖ ಈ ಅವಧಿಯಲ್ಲಿ ರಾಜ್ಯಾದ್ಯಂತ ಉಷ್ಣಾಂಶ ಹೆಚ್ಚು, ಜೊತೆಗೆ ತೇವಾಂಶವೂ ಹೆಚ್ಚಾಗಿರುತ್ತದೆ.<br>❖ ಮೋಡ ಕವಿದ ಪರಿಸ್ಥಿತಿ ಕಂಡುಬರುವುದು.<br>❖ ಈ ಋತುಮಾನದಲ್ಲಿ ಕರ್ನಾಟಕಕ್ಕೆ ಶೇಕಡ 80 ರಷ್ಟು ಮಳೆಯಾಗುತ್ತದೆ. | |
| **31** | ರಸ್ತೆ ಸಾರಿಗೆ:<br>❖ ರಸ್ತೆಗಳನ್ನು ಸುಲಭವಾಗಿ, ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದು.<br>❖ ಇದರಿಂದ ಪ್ರಯಾಣಿಕರು ಮತ್ತು ಸರಕುಗಳನ್ನು ರಾಜ್ಯದ ಮೂಲೆ ಮೂಲೆಗೂ ಸಾಗಿಸಬಹುದು.<br>❖ ರಸ್ತೆಗಳ ಅಭಿವೃದ್ಧಿಯು ರಾಜ್ಯದ ಕೃಷಿ, ಕೈಗಾರಿಕೆ, ಗಣಿಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯನ್ನು ನಿರ್ಧರಿಸುತ್ತದೆ.<br>ವಾಯು ಸಾರಿಗೆ:<br>❖ ಅತಿ ವೇಗ ಚಾಲಿತ ಸಾರಿಗೆ ಮಾಧ್ಯಮ.<br>❖ ದೂರದ ಸ್ಥಳಗಳಿಗೆ ಬೇಗ ಸಾಗಿಸುವುದಕ್ಕೆ ಅನುಕೂಲ<br>❖ ನೈಸರ್ಗಿಕ ವಿಪತ್ತುಗಳು ,ಯುದ್ಧಗಳಂತಹ ತುರ್ತು ಪರಿಸ್ಥಿತಿಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲು ಸಹಾಯಕ | ❖ ಉತ್ತಮ ಹವಾಮಾನ,<br>❖ ವಿದ್ಯುತ್ ಪೂರೈಕೆ,<br>❖ ತಾಂತ್ರಿಕ ಪರಿಣಿತರು,<br>❖ ಆರ್ಥಿಕ ನೆರವು,<br>❖ ವಿಶಾಲವಾದ ಮಾರುಕಟ್ಟೆ<br>❖ ಮೂಲ ಸೌಕರ್ಯಗಳಿರುವುದರಿಂದ |
| **32** | ❖ ಮಿತಿಮೀರಿದ ಜನಸಂಖ್ಯೆ<br>❖ ಹೆಚ್ಚುತ್ತಿರುವ ಔದ್ಯೋಗೀಕರಣ<br>❖ ವಿಸ್ತರಣೆಯಾಗುತ್ತಿರುವ ನಗರ ಪ್ರದೇಶಗಳು<br>❖ ವಾಯು ಮಾಲಿನ್ಯ<br>❖ ಜಲಮಾಲಿನ್ಯ ಮತ್ತು ಭೂ ಸವಕಳಿ | ❖ ಸ್ವ–ಉದ್ಯೋಗ ಕಾರ್ಯಕ್ರಮಗಳು<br>❖ 'ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ<br>❖ 'ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನೆ'<br>❖ 'ಸ್ವರ್ಣಜಯಂತಿ ಗ್ರಾಮ ಸ್ವ–ರೋಜಗಾರ್ ಯೋಜನೆ'<br>❖ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ(ದೀನ ದಯಾಳ ಅಂತ್ಯೋದಯ ಯೋಜನೆ)<br>❖ ಕೂಲಿ ಉದ್ಯೋಗ ಕಾರ್ಯಕ್ರಮಗಳು<br>❖ 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ' |

| | | |
|---|---|---|
| 33 | ❖ ಗುರಿಗಳನ್ನು ಸ್ಥಿರಪಡಿಸುವುದು<br>❖ ಗುರಿಗಳ ನಿರ್ದಿಷ್ಟತೆ.<br>❖ ಪರ್ಯಾಯ ನಿರ್ಧಾರಗಳನ್ನು ಹುಡುಕುವುದು<br>❖ ಯೋಜನೆಗಳನ್ನು ಪಕ್ವಗೊಳಿಸುವುದು.<br>❖ ವಿವೇಚನಾಯುಕ್ತ ತರ್ಕಬದ್ಧ ಯೋಜನೆಗಳು<br>❖ ವಸ್ತುಸ್ಥಿತಿ ಅರಿಯುವುದು.<br>❖ ಮೌಲ್ಯೀಕರಿಸುವುದು. | ❖ ವ್ಯವಹಾರ ಸಂಸ್ಥೆಗಳ ಜೀವರಕ್ತವಾಗಿದೆ.<br>❖ ಹಣಕಾಸು ಇಲ್ಲದೆ ಯಾವುದೇ ವ್ಯವಹಾರ ಚಟುವಟಿಕೆಗಳು ಸಾಧ್ಯವಿಲ್ಲ.<br>❖ ಉತ್ಪಾದನೆಯ ಕಾರ್ಯದಲ್ಲಿ ಮತ್ತು ವಸ್ತುಗಳನ್ನು ಹಾಗೂ ಸೇವೆಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಬೇಕಾಗುವ ಸಾಧನಗಳನ್ನು ಪೂರೈಸುತ್ತದೆ.<br>❖ ವ್ಯವಹಾರ ಸಂಸ್ಥೆಗಳ ಹಲವಾರು ಅಂಗಗಳು ತಮ್ಮ ಗುರಿಗಳನ್ನು ಸಾಧಿಸುವುದು<br>❖ ಬಂಡವಾಳವನ್ನು ತೊಡಗಿಸುವುದರಲ್ಲಿ ಹಾಗೂ ವಿನಿಯೋಗ ಮಾಡುವಲ್ಲಿ ಮಾರ್ಗದರ್ಶನ ನೀಡುತ್ತದೆ.<br>❖ ಸಂಸ್ಥೆಯನ್ನು ಆಧುನಿಕತೆಗೊಳಿಸುವುದು.<br>❖ ಸಂಸ್ಥೆಯು ಕೈಗೊಳ್ಳುವ ಹೊಸ ಪರಿಶೋಧನೆಗಳು, ಹೆಚ್ಚು ಪ್ರಚಾರ ಪಡಿಸುವಲ್ಲಿ ಅವಶ್ಯಕವಾಗಿದೆ.<br>❖ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹಣಕಾಸಿನ ಅವಶ್ಯಕತೆ ಹೆಚ್ಚಾಗಿದೆ.<br>❖ ಹಣಕಾಸಿನ ಸ್ಥಿರತೆ ಒಂದು ಸಂಸ್ಥೆಯ ಯೋಗ್ಯತೆಯನ್ನು ಹೆಚ್ಚಿಸುತ್ತದೆ. |
| 34 | ❖ ಶಿವಾಜಿ ತನ್ನ ವಿಶಾಲ ರಾಜ್ಯದಲ್ಲಿ ಉತ್ತಮ ಆಡಳಿತ ಸಂಘಟಿಸಿದ್ದನು.<br>❖ ತನ್ನ ರಾಜ್ಯವನ್ನು ಅನೇಕ ಪ್ರಾಂತಗಳಾಗಿ ವಿಂಗಡಿಸಿದ್ದನು.<br>❖ ಅವುಗಳನ್ನು ಸ್ವರಾಜ್ಯ ಮತ್ತು ಮೊಘಲರ ರಾಜ್ಯಗಳೆಂದು ಕರೆಯುತ್ತಿದ್ದರು.<br>❖ ಮರಾಠಿ ಅಡಳಿತ ಭಾಷೆಯಾಗಿತ್ತು.<br>❖ ಸರ್ಕಾರದ ಮುಖ್ಯಸ್ಥನಾಗಿದ್ದ ದೊರೆಗೆ ಆಡಳಿತದಲ್ಲಿ<br>❖ ನೆರವು ನೀಡಲು ಅಷ್ಟ ಪ್ರಧಾನರೆಂಬ ಮಂತ್ರಿಗಳಿದ್ದರು.<br>❖ ಜೊತೆಗೆ ಸಹಾಯಕ್ಕಾಗಿ ಇತರೆ ಅಧಿಕಾರಿಗಳಿದ್ದರು.<br>❖ ಪ್ರಾಂತ, ಜಿಲ್ಲೆ, ಗ್ರಾಮ ಆಡಳಿತದ ಘಟಕಗಳಾಗಿದ್ದವು.<br>❖ ಅವನು ಜಾಗೀರುದಾರಿ ಕಂದಾಯ ಪದ್ಧತಿಯನ್ನು ರದ್ದುಪಡಿಸಿದನು.<br>❖ ಕಂದಾಯವನ್ನು ಹಣದ ಅಥವಾ ವಸ್ತು ರೂಪದಲ್ಲಿ ನೀಡಬೇಕಿತ್ತು.<br>❖ ಚೌತ್ ಹಾಗೂ ಸರದೇಶಮುಖಿಯೆಂಬ ಭೂಕಂದಾಯಗಳಿದ್ದವು. | |
| 35 | ❖ ಆಳುವ ವರ್ಗ ಮನಬಂದಂತೆ ಅಧಿಕಾರ ನಡೆಸುವುದಕ್ಕೆ ತೆರೆ ಬಿದ್ದಿತು.<br>❖ ಆರ್ಥಿಕ ವ್ಯವಸ್ಥೆಯಲ್ಲೂ ಗಮನಾರ್ಹವಾದ ಪ್ರಗತಿಪರ ಬದಲಾವಣೆಗಳು ಕಂಡುಬಂದವು.<br>❖ ಬಾರ್ಬೇರಿಯನ್ನರ ಅಟ್ಟಹಾಸಗಳನ್ನುಮಟ್ಟಹಾಕಿತು.<br>❖ ಪ್ರಮುಖವಾಗಿ ಮನುಷ್ಯನು ತನ್ನ ಹಕ್ಕುಬಾಧ್ಯತೆಗಳ ಹಾಗೂ ಕರ್ತವ್ಯಗಳನ್ನು ಈ ವ್ಯವಸ್ಥೆಯಿಂದ ಮನಗಂಡನು.<br>❖ ಇದಲ್ಲದೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಸಾಹಿತ್ಯದ ಬೆಳವಣಿಗೆಗೆ ಈ ವ್ಯವಸ್ಥೆ ಪ್ರೋತ್ಸಾಹ ನೀಡಿತು.<br>❖ ವಿಶೇಷವಾದ ಕೊಡುಗೆಯೆಂದರೆ ನಿಯಮಾವಳಿಗಳ ರಚನೆ.<br>❖ ಈ ನಿಯಮಾವಳಿಗಳ ಮೂಲಕ ನೋಬಲರು ತರಬೇತಿ ಪಡೆದರು.<br>❖ ಇದರಿಂದಾಗಿ ನೋಬಲರು, ಮಹಿಳೆಯರ, ಅಶಕ್ತರ ಮತ್ತು ಕ್ರೈಸ್ತಮತದ ರಕ್ಷಕರಾದರು.<br>❖ ಊಳಿಗಮಾನ್ಯ ವ್ಯವಸ್ಥೆಯು ಹೊಸ ನಗರಗಳ ವ್ಯವಸ್ಥೆಯನ್ನು ಕ್ರಮೇಣ ಸೃಷ್ಟಿಸಿತು.<br>❖ ಇವು ವ್ಯಾಪಾರ ಮತ್ತು ಕರಕುಶಲತೆಯ ಕೇಂದ್ರಗಳಾದವು.<br>❖ ಹೊಸ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬಂದವು. | ❖ ಮತಸುಧಾರಣೆಯ ಪರಿಣಾಮವಾಗಿ ಕ್ರೈಸ್ತ ಮತದ ಅಖಂಡತೆಗೆ ಪೆಟ್ಟು ಬಿದ್ದಿತು.<br>❖ ಕ್ರೈಸ್ತ ಮತವು ಮುಖ್ಯವಾಗಿ ಮೂರು ಶಾಖೆಗಳಾಗಿ ಒಡೆಯಿತು. ಅವು ಕ್ಯಾಥೋಲಿಕ್ ಚರ್ಚ್, ಆರ್ಥೋಡಾಕ್ಸ್, ಚರ್ಚ್ ಮತ್ತು ಪ್ರಾಟೆಸ್ಟಂಟ್ ಚರ್ಚ್.<br>❖ ಯುರೋಪಿನ ಅನೇಕ ದೇಶಗಳ ರಾಜರುಗಳು ಪೋಪ್‌ನ ಹಿಡಿತದಿಂದ ಸ್ವತಂತ್ರರಾದರು.<br>❖ ಮತಸುಧಾರಣೆಯು ರಾಷ್ಟ್ರೀಯ ಪ್ರಭುತ್ವಗಳ ಉದಯಕ್ಕೆ ಕಾರಣವಾಯಿತು.<br>❖ ಮುಟ್ಟುಗೋಲು ಹಾಕಿಕೊಂಡ ಚರ್ಚಿನ ಸಂಪತ್ತನ್ನು ಆರ್ಥಿಕ ಅಭಿವೃದ್ಧಿಗಾಗಿ ವಿನಿಯೋಗಿಸಲಾಯಿತು.<br>❖ ರಾಷ್ಟ್ರೀಯ ಭಾವನೆಗಳು ಇನ್ನಷ್ಟು ಬಲವಾದವು.<br>❖ ಯುರೋಪಿನ ರಾಜರುಗಳು ಧಾರ್ಮಿಕ ಸಹಿಷ್ಣುತೆಯನ್ನು ಅಳವಡಿಸಿಕೊಂಡರು.<br>❖ ಈ ಚಳವಳಿಯಿಂದಾಗಿ ಸಾಹಿತ್ಯ ಕ್ಷೇತ್ರ ಬೆಳೆಯಿತು.<br>❖ ಪ್ರಾದೇಶಿಕ ಭಾಷೆಗಳು ಐರೋಪ್ಯರ ಮನಸ್ಸಿನ ಮೇಲೆ ಪ್ರಭಾವ ಬೀರಿದವು.<br>❖ ಕ್ಯಾಥೋಲಿಕ್ ಚರ್ಚ್‌ನಲ್ಲೇ ಸುಧಾರಣೆಯಾಗಿ, ಅದೇ ಮುಂದೆ "ಪ್ರತಿಸುಧಾರಣೆ" ಚಳುವಳಿಯಾಯಿತು. |

| | |
|---|---|
| 36 | ❖ ಲಿಖಿತ ಮತ್ತು ಬೃಹತ್ ಸಂವಿಧಾನ<br>❖ ಭಾಗಶಃ ನಮ್ಯ ಮತ್ತು ಭಾಗಶಃ ಅನಮ್ಯ ಸಂವಿಧಾನ<br>❖ ಸಂಸದೀಯ ಸರ್ಕಾರ ಪದ್ಧತಿ<br>❖ ಗಣತಂತ್ರ ವ್ಯವಸ್ಥೆ<br>❖ ಸಂಯುಕ್ತ ಪದ್ಧತಿ<br>❖ ಮೂಲಭೂತ ಹಕ್ಕುಗಳು<br>❖ ಮೂಲಭೂತ ಕರ್ತವ್ಯಗಳು<br>❖ ರಾಜ್ಯ ನಿರ್ದೇಶಕ ತತ್ವಗಳು<br>❖ ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ<br>❖ ಏಕ ಪೌರತ್ವ<br>❖ ವಯಸ್ಕ ಮತದಾನ<br>❖ ಪದ್ಧತಿ ಪಕ್ಷ ಪದ್ಧತಿ |
| 37 | ❖ ಕರ್ನಾಟಕದ ಪುರಾತನ ಮೂಲವೃತ್ತಿಗಳಲ್ಲಿ ವ್ಯವಸಾಯವೂ ಒಂದು.<br>❖ ಇದು ಮುಖ್ಯ ಜೀವನಾಧಾರಿತ ವೃತ್ತಿ.<br>❖ ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು.<br>❖ ಆರ್ಥಿಕಾಭಿವೃದ್ಧಿಯು ವ್ಯವಸಾಯವನ್ನಾಧರಿಸಿದೆ.<br>❖ ಜೀವನ ನಡೆಸಲು ಉದ್ಯೋಗವನ್ನು ನೀಡಿದೆ.<br>❖ ಜನರಿಗೆ ಆಹಾರ, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ.<br>❖ ರಾಜ್ಯದ ಆದಾಯದ ಮೂಲವಾಗಿದೆ. ವಿದೇಶಿ ವಿನಿಮಯ ಗಳಿಸಿಕೊಡುತ್ತದೆ.<br>❖ ಕಾಫಿ, ರೇಷ್ಮೆ, ಸಾಂಬಾರ ಪದಾರ್ಥಗಳು, ತಂಬಾಕು, ಹತ್ತಿ ಮುಂತಾದುವು ರಫ್ತಾಗುವ ಕೃಷಿ ಉತ್ಪನ್ನಗಳು.<br>❖ ತೃತೀಯ ವೃತ್ತಿಗಳಾದ ಸಾರಿಗೆ, ಬ್ಯಾಂಕಿಂಗ್ ವ್ಯವಸ್ಥೆ, ವಿಮೆ ಇತ್ಯಾದಿಗಳ ಪ್ರಗತಿಗೂ ಇದು ಪೂರಕವಾಗುತ್ತದೆ. |
| 38 | <br> |